# ಕರ್ನಾಟಕ ಪರಿಷತ್ತು

| | |
|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | (382) 315 |
| **ಸದಸ್ಯರ ಹೆಸರು** | ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ವಿಷಯ** | ವೃದ್ಧಾಪ್ಯ, ಅಂಗವಿಕಲರ ಮತ್ತು ವಿಧವಾ ವೇತನ ಬಾಕಿ ಬಗ್ಗೆ |
| **ಉತ್ತರಿಸಬೇಕಾದ ದಿನಾಂಕ** | 23.09.2020 |
| **ಉತ್ತರಿಸುವ ಸಚಿವರು** | ಕಂದಾಯ ಸಚಿವರು |
| | |
| **ಪ್ರಶ್ನೆ** | **ಉತ್ತರ** |
| ಅ) ರಾಜ್ಯಾದ್ಯಂತಒಟ್ಟುಎಷ್ಟು ತಿಂಗಳುಗಳಿಂದ, ವೃದ್ಧಾಪ್ಯ ವೇತನ ಅಂಗವಿಕಲರ ವೇತನ ಹಾಗೂ ವಿಧವಾ ವೇತನ ಬಟವಾಡೆಯಾಗದೇ ಉಳಿದಿದೆ; ಇದಕ್ಕೆ ಕಾರಣಗಳೇನು; | ವಿವಿಧ ಸಾಮಾಜಿಕ ಯೋಜನೆಗಳಡಿ ಮಾಸಿಕ ಪಿಂಚಣಿ ನಿರ್ವಹಣಾ ಪ್ರಕ್ರಿಯೆಯನ್ನು ಜನವರಿ 2020 ರಿಂದ ಪೂರ್ಣವಾಗಿ ಖಜಾನೆ-2 ವ್ಯವಸ್ಥೆಯಡಿ ತರಲಾಗಿದ್ದು, ಎಲ್ಲಾ ಜಿಲ್ಲಾ ಖಜಾನೆಯಲ್ಲಿ ಆಗಸ್ಟ್ 2020 ರ ಮಾಹೆಯವರೆಗೂ ಬಿಲ್ಲಿಂಗ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿರುತ್ತದೆ. ಮುಂದುವರೆದು, ಈ ಹಿಂದಿನ ಖಜಾನೆ-1 ವ್ಯವಸ್ಥೆಯಡಿ ಅಸಮರ್ಪಕ ವಿಳಾಸ, ಪಿನ್ ಕೋಡ್, ಬ್ಯಾಂಕ್‌ಖಾತೆ ಸಂಖ್ಯೆ, ಐ.ಎಫ್.ಎಸ್.ಸಿ ಕೋಡ್ ಇತ್ಯಾದಿ ಮಾಹಿತಿಯುಳ್ಳ ದಾಖಲೆಗಳನ್ನು ಖಜಾನೆ-2ಗೆ ವರ್ಗಾಯಿಸಲು ಸಾಧ್ಯವಾಗದಿರುವ ಕಾರಣ ಪಿಂಚಣಿ ವಿತರಣೆಯು ಸಾಧ್ಯವಾಗಿರುವುದಿಲ್ಲ. ಸದರಿ ಪ್ರಕರಣಗಳನ್ನು ಕಡ್ಡಾಯ ಭೌತಿಕ ಪರಿಶೀಲನೆಗೆ ಒಳಪಡಿಸಿ, ನಿಖರ ಮಾಹಿತಿಯನ್ನು ಸಂಗ್ರಹಿಸಿ ಕ್ರಮವಹಿಸಲಾಗುತ್ತಿದೆ. |
| ಆ) ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಬಟವಾಡೆ ಮಾಡಲುಕ್ರಮವಹಿಸಲಾಗುವುದು; | ಮಂಜೂರಾತಿ ಪ್ರಾಧಿಕಾರಿಗಳಾದ ತಹಶೀಲ್ದಾರರು ಫಲಾನುಭವಿಗಳ ಮಾಹಿತಿಯಲ್ಲಿನ ನ್ಯೂನ್ಯತೆಯನ್ನು ಸರಿಪಡಿಸಿ ಕ್ರಮವಹಿಸಿದ ಪ್ರಕರಣಗಳನ್ನು ಅನುಕಲನೆ ಮೂಲಕ ಖಜಾನೆ-2 ತಂತ್ರಾಂಶಕ್ಕೆ ವರ್ಗಾಯಿಸಿ, ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ. ಅಲ್ಲದೇ, ಭೌತಿಕ ಪರಿಶೀಲನೆ ನಡೆಸಿ ಸಮರ್ಪಕ ವಿಳಾಸ, ಪಿನ್ ಕೋಡ್ ಸಂಗ್ರಹಿಸಿ ಮರುಚಾಲನೆಗೊಳಿಸಲಾದ ಫಲಾನುಭವಿಗಳಿಗೆ 3 ತಿಂಗಳ ಹಿಂಬಾಕಿಯೊಂದಿಗೆ ಪಿಂಚಣಿ ಪಾವತಿಸಲಾಗುತ್ತಿದೆ ಹಾಗೂ ಪ್ರತಿ ವಾರ ಈ ಪ್ರಕರಣಗಳ ಮಾಹಿತಿ ಪಡೆದು ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ. |

ಡಿ.ಎಸ್‌ಎಸ್‌ಪಿ-ಎಲ್‌ಎಕ್ಯೂ-8-2020

(ಆರ್. ಅಶೋಕ್)

ಕಂದಾಯ ಸಚಿವರು